ವಿಚಾರ ಮಾಡಿದರೆ, ಇದು ಸರಿಯಿಲ್ಲ, ಡ್ರಾಫ್ಟಿಂಗೂ ಸರಿಯಿಲ್ಲ, ವಿಷಯಗಳೂ ಸರಿಯಿಲ್ಲ, ಯಾರು ಹೇಳಿದರೋ ನಮಗೆ ಗೊತ್ತಿಲ್ಲ. ಆದುದರಿಂದ ಇದನ್ನು ನಾಳೆಗೆ ಹಾಕಿದರೆ ಕೂಲಂಕಷವಾಗಿ ವಿಚಾರ ಮಾಡಿಬಿಟ್ಟು ಪಾಸ್ ಮಾಡೋಣ ಎಂದು ಹೇಳುತ್ತಾ ಇದ್ದೇನೆ, ಯೋಚನೆ ಮಾಡಿ ಹೇಳಿ.

ಶ್ರೀ ಎಂ. ಚಂದ್ರಶೇಕರ್.—ಡಿಸ್ಕಷನ್‌ಗೆ ಬೇಕಾದರೆ ನಾಳೆಗೆ ಹಾಕಿ.

ಅಧ್ಯಕ್ಷರು.—ಓಟಿಗೆ ಹಾಕಲೇ.

ಶ್ರೀ ಯು. ಭೂಪತಿ.—ಅವರು ನಾಳೆಗೆ ಹಾಕಿ ಅಂದರೆ ನೀವು ಓಟಿಗೆ ಹಾಕುತ್ತೇನೆ ಎಂದು ಹೇಳಿದಿರಲ್ಲ, ನಮ್ಮ ಪರಿಸ್ಥಿತಿ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಡಿಸ್ಕಷನ್ ನಾಳೆ. ಏಕೆಂದರೆ ಅವರದು ಸ್ವಲ್ಪ ಅಫಿಷಿಯಲ್ ಅಮೆಂಡ್‌ಮೆಂಟ್ ಇದ್ದಹಾಗೆ ಇದೆ. ಆದ್ದರಿಂದ ಇದನ್ನು ನಾಳೆಗೆ ತೆಗೆದುಕೊಂಡು ಬಿಡಿ.

ಅಧ್ಯಕ್ಷರು.—ಆಯಿತು, ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಮ್ಮ ಮಾತು ಕೇಳಲಿಲ್ಲ ಅಂದರೆ ಅವರ ಮಾತನ್ನಾದರೂ ಕೇಳಿ.

ಅಧ್ಯಕ್ಷರು.—ನಿಮ್ಮ ಮಾತು ಕೇಳುತ್ತೇನೆ, ಅವರ ಮಾತೂ ಕೂಡ ಕೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮದು ಅರ್ಧ ಗಂಟೆ ಚರ್ಚೆ ಇದೆ. ೪ ಸಲ ಬಂದು ಹೋಯಿತು. ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು.—ಇನ್ನೊಂದು ಬಿಲ್ ಇದೆ. ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕ ಇದೆ. ಪ್ರಕಾಶ್‌ರವರೇ, ಇದನ್ನು ಮುಂದನೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ ೬೮ರ ಕೆಳಗೆ ಫ್ಲಡ್ ಸಿಚುಯೇಷನ್ ಬಗ್ಗೆ ಡಿಸ್ಕಷನ್ ಇದೆ, ಅದು ಆಗಬೇಕಲ್ಲ. ಈಗ ೪-೧೫ ಗಂಟೆಯಾಯಿತು. ತಾವು ಟೈಂ ಫಿಕ್ಸ್ ಮಾಡಿದ್ದೀರಿ.

ಅಧ್ಯಕ್ಷರು.—೧೦ ನಿಮಿಷದಲ್ಲಿ ಈ ಬಿಲ್ ಮುಗಿಯುತ್ತದೆ.

THE KARNATAKA TAXATION LAWS (AMENDMENT) BILL, 1988

Motion to Consider

SRI M.P. PRAKASH (Minister for Information, and Tourism).—Mr. Speaker, Sir, I beg to move that ;

"The Karnataka Taxation Laws (Amendment) Bill, 1988 be taken into consideration."

The question was proposed

SRI M.P. PRAKASH.—Sir, in the Karnataka Sales Tax Act, 1957 Section 5 is proposed to be amended to the extent that the time limit which is now granted till 31st May 1988 to dispose off the old stock of Indian Made foreign liquor which has already been suffered tax at the Rate prevailing prior to 1st April 1988, is to be extended upto 31st July 1988.

With regard to Section 6, the Supreme Court has held that taxable goods purchased and consumed for ancillary purposes like

fuel and consumables in the manufacture of goods for sale are not liable for purchase tax under Section 6. Therefore taxes levied on such purchases hitherto, have become liable for refunds. In view of cumbersome procedure and review of taxes, this amendment has become necessary. Further, goods consumed otherwise than in manufacturing of goods are also proposed to be taxed In view of the Supreme Court judgement, amendment to Section 6 is now contemplated.

Section 12 in also proposed to be amended to extend the limitation period of three years prescribed for completion of assessment relating to the years upto 1984-85 by one more year to complete assessments in pending cases.

Further Section 5 of the the Karnataka Tax on the Entry of Goods into Local Areas for Consumption, Use or Sale Therein Act 1979 is also proposed to be amended to extend the limitation period of three years prescribed for completion of assessment of old cases, by one more year to complete assessments in pending case.

Section 2 of the Karnataka Agricultural Income-Tax Act 1957 is proposed to be amended to exclude Pepper and Cardamom grown as subsidiary crops in the land used for growing non-plantation crops like arecanut and coconut and also Section 12 is proposed to be amended to exempt certain contributions made from the payment of agricultural income-tax. These are only formal amendments and therefore I request this august House that this Bill be passed.

ಅಧ್ಯಕ್ಷರು.—ಇದರ ಮೇಲೆ ತಾವು ಮಾತನಾಡುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸೇಲ್ಸ್ ಟ್ಯಾಕ್ಸ್ ಆಕ್ಟ್ ೧೯೫೭ ' Section 5 is Proposed to be amended to extend time beyond 31st may 1988 upto 31st July 1988 to enable dealers to dispose off the old stock of Indian made foreign liquor which has already been suffered tax at the rate prevailing prior to 1st April 1988. " ಮೇ ತಿಂಗಳಿನಿಂದ ಜುಲೈ ತಿಂಗಳವರೆಗೆ ೨ ದರೆ ಎರಡು ತಿಂಗಳಿಗೊಸ್ಕರ ಎಕ್ಸ್‌ಟೆಂಡ್ ಮಾಡುತ್ತಿದ್ದೀರಿ, ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ ಬಾಂಡೆಡ್ ವೇರ್ ಹೌಸ್ ಡಿಸ್ಟಲರೀಸ್ ಮ್ಯಾನು ಫ್ಯಾಕ್ಚರ್ ಮಾಡತಕ್ಕಪರು ಅಲ್ಲಿ ಸ್ಟಾಕ್ ಇಡುತ್ತಾರೆ, ಸ್ಟಾಕ್ ಇಟ್ಟ ಕನ್‌ಸಾಲಿಡೆಟೆಡ್ ಬೆಸಿಸ್‌ನಲ್ಲಿ ಸೇಲ್ ಮಾಡುತ್ತಾರೆ. ನಂತರ ಎಕ್ಸ್‌ಸೈಜ್ ಅಧಿಕಾರಿಗಳ ಮುಖಾಂತರ ಟ್ಯಾಕ್ಸ್ ಅನ್ನು ಸರ್ಕಾರಕ್ಕೆ ಕಟ್ಟುತ್ತಾರೆ. ನೀವು ಜುಲೈ ತಿಂಗಳಿನಲ್ಲಿ ಅಪೆಂಡ್‌ಮೆಂಟ್ ತಂದು ಬಾಂಡೆಡ್ ವೇರ್ ಹೌಸ್‌ಗಳನ್ನು ಅಬಾಲೀಷ್ ಮಾಡಿ, ಡಿಸ್ಟ್ರಿಬ್ಯೂಷನ್ ಲೈಸನ್ಸ್ ಅನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೀರಿ. ಇದರಿಂದ ಏನಾಗಿದೆ ಅಂದರೆ ರಾಜ್ಯದಲ್ಲಿ ೩-೪ ಜನ ಬಾಂಡೆಡ್ ವೇರ್ ಹೌಸ್‌ನವರು ಇದ್ದು ಅವರ ಹತ್ತಿರ ೧ ಕೋಟಿ ರೂಪಾಯಿಯ ಮಾಲು ಸ್ಟಾಕ್ ಇದೆ. ಸರ್ಕಾರದವರು ಏನು ಹೇಳುತ್ತಾರೆ ಅಂದರೆ ರಿಲೀಜ್ ಮಾಡುವುದಕ್ಕಿಂತ ಮುಂಚೆ ಒಂದು ಕೋಟಿ ರೂಪಾಯಿಯ ಟ್ಯಾಕ್ಸ್ ಅನ್ನ ಕೊಟ್ಟು ರಿಲೀಜ್ ಮಾಡಿಯೆಂದು ಹೇಳುತ್ತಿದ್ದಾರೆ ಇದು ನನ್ನೆಯ ದಿವಸ ನನ್ನ ಗಮನಕ್ಕೆ ಬಂತು. ಇದರಲ್ಲಿ ನನಗೆ ಯಾವ ವಿಧವಾದ ಡಿಲಾಷಿಪ್ಸ್ ಇಲ್ಲ. ಬಾಂಡೆಡ್ ವೇರ್ ಹೌಸ್‌ನವರು ಹೋಲ್‌ಸೇಲ್ ಡಿಸ್ಟ್ರಿಬ್ಯೂಷನ್ ಲೈಸೆನ್ಸ್ ಅನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದಾರೆ.

ಇವತ್ತು ಸ್ಟಾಕ್ ಇರುವುದನ್ನು ಸರ್ಕಾರದವರು ಪರ್‌ಚೇಸ್ ಮಾಡಬೇಕು. ಇಲ್ಲದಿದ್ದರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಟ್ಯಾಕ್ಸ್ ಕಟ್ಟಲಿಕ್ಕೆ ವ್ಯವಸ್ಥೆ ಮಾಡಬೇಕು. ಅವರು ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳಿಗೆ ನಿವೇದನೆ ಮಾಡಿದ್ದಾರೆ. ಅದಕ್ಕೆ ಅವರೂ ಕೂಡ ಒಪ್ಪಿದ್ದಾರೆ. ಜುಲೈ ತಿಂಗಳವರೆಗೆ ಮಾಡುವುದರಿಂದ ಇರತಕ್ಕ ಸ್ಟಾಕ್ ಅನ್ನು ಮಾರಾಟ ಮಾಡಲಿಕ್ಕೆ ಆಗುವುದಿಲ್ಲ. ಡಿಸೆಂಬರ್‌ವರೆಗೆ ಸಮಯ ಮುಂದೂಡಿದರೆ ಇದನ್ನು ಸೇಲ್ ಮಾಡಿ ಟ್ಯಾಕ್ಸ್ ಕಟ್ಟಲಿಕ್ಕೆ ಅವಕಾಶ ಆಗುತ್ತದೆ. ಆದ್ದರಿಂದ, ದಯವಿಟ್ಟು ತಾವು ಇದರ ಬಗ್ಗೆ ಪುನರ್ ಆಲೋಚನೆ ಮಾಡಿ. ಸ್ಟಾಕ್ ಸೇಲ್ ಮಾಡಬೇಕು. ಅದರಿಂದ ಟ್ಯಾಕ್ಸ್ ಗವರ್ನ್‌ಮೆಂಟಿಗೆ ಬರಬೇಕು ಎನ್ನುವುದಿದ್ದರೆ ಡಿಸೆಂಬರ್ ವರೆಗೆ ಎಕ್ಸ್‌ಟೆಂಡ್ ಮಾಡಿ ಅನುಕೂಲ ಮಾಡಿಕೊಡಿ. ತಾವು ಅದನ್ನು ಮಾಡಿಕೊಡದೇ ಹೋದರೆ ಈ ತಿದ್ದುಪಡಿಯಿಂದ ಅನುಕೂಲ ಆಗುವುದಿಲ್ಲ, ನಿಮ್ಮ ಸ್ಪಷ್ಟೀಕರಣ ಪೂರ್ಣವಾಗುವುದಿಲ್ಲ ಎಂದು ಹೇಳುತ್ತೇನೆ, ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ ಟ್ಯಾಕ್ಸ್ ಹಾಕಿರುವುದು ೩೧ರ ಮೇ ತಿಂಗಳವರೆಗೆ ಕಾಲಮಿತಿ ಇತ್ತು. ಸಾರ್ವಜನಿಕರಿಂದ ಬಂದ ಮನವಿಗಳ ಪ್ರಕಾರ ಅವಧಿಯನ್ನು ಜುಲೈ ೧೫ರವರೆಗೆ ವಿಸ್ತರಿಸಲಿಕ್ಕೆ ತೀರ್ಮಾನ ಕೈಗೊಳ್ಳಲಾಗಿದೆ. ತಾವು ಮತ್ತೆ ಡಿಸೆಂಬರ್‌ವರೆಗೆ ಎಕ್ಸ್‌ಟೆಂಡ್ ಮಾಡಬೇಕೆಂದಹೇಳುವುದು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಅನುಭವದ ಪ್ರಕಾರ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಇವೊತ್ತು ಮಾರಿಲ್ಲ, ಬಾಂಡೆಡ್ ವೇರ್ ಹೌಸ್ ಮಜಾ ಮಾಡಿದ್ದಾರೆ. ಅವರಿಗೆ ವಹಿವಾಟಿಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಎಕ್ಸ್‌ಟೆಂಡ್ ಮಾಡಿಕೊಡದೇ ಇದ್ದರೆ ಹೇಗೆ ? ದಯವಿಟ್ಟು ಇದರ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಡಿಸ್ಟ್ರಿಬ್ಯೂಟರ್ಸ್ ಲೈಸೆನ್ಸ್‌ಗೂ ಈ ಅಮೆಂಡ್‌ಮೆಂಟಿಗೂ ಯಾವುದೇ ಸಂಬಂಧ ಇಲ್ಲ. ಆ ವಿಚಾರದಲ್ಲಿ ತೊಂದರೆಯಾಗಿದ್ದರೆ ಅವರು ಸರ್ಕಾರಕ್ಕೆ ಮನವಿಯನ್ನು ಕೊಟ್ಟಾಗ ಪರಿಗಣಿಸುತ್ತೇವೆ, ಸಧ್ಯಕ್ಕೆ ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕು, ಸ್ಟಾಕ್ ಇದೆ ಎಂದು ಇಟ್ಟುಕೊಳ್ಳೋಣ, ಡಿಸ್‌ಪೋಸ್ ಮಾಡಲಿಕ್ಕೆ ನಿಮ್ಮ ಸಲಹೆ ಏನು ?

ಶ್ರೀ ಎಂ. ಪಿ. ಪ್ರಕಾಶ್.—ಅದು ಬೇರೆ ಆಗುತ್ತದೆ, ಡಿಸ್ಟ್ರಿಬ್ಯೂಟರ್ಸ್ ಲೈಸೆನ್ಸ್ ಎಕ್ಸೆಜ್ ಟ್ಯಾಕ್ಸ್ ಕೆಳಗೆ ಬರುತ್ತದೆ. ಈ ತಿದ್ದುಪಡಿಗೂ ಅದಕ್ಕೂ ಸಂಬಂಧ ಬರುವುದಿಲ್ಲ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

'' ೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 6ರ ವರೆಗೆ.

ಅಧ್ಯಕ್ಷರು.— '' ಖಂಡ ೨ರಿಂದ ೬ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರತ್ತದೆ ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ರಿಂದ ೬ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ. ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

(ಮೊದಲನೇ ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಮಂತ್ರಿಗಳು).—೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ. '' ೧೯೮೮ನೇ ಇಸವಿಯ ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಂಸೂದೆಗೆ ಒಪ್ಪಿಗೆ ನೀಡಲಾಯಿತು

೬೦ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ.

ಬೆಂಗಳೂರಿನಲ್ಲಿ ಹಾಗೂ ರಾಜ್ಯದ ಇತರೆ ಕಡೆಗಳಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಸಾರ್ವಜನಿಕರ ಆಸ್ತಿ–ಪಾಸ್ತಿ ಹಾಗೂ ಜೀವಕ್ಕೆ ಉಂಟಾದ ಭಾರೀ ಅನಾಹುತದ ಬಗ್ಗೆ.

ಅಧ್ಯಕ್ಷರು.—ಈಗ ವಿರೋಧ ಪಕ್ಷದ ನಾಯಕಿಯವರಾದ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರು ಇದ್ದಾರೆ ?

ಶ್ರೀ ಆರ್. ವೆಂಕಟರಾಮಯ್ಯ.—ದೇವೇಗೌಡರು ಬಂದರು ಒಳ್ಳೆಯದು. ಜಾಸ್ತಿ ಕೆಲಸವನ್ನು ಅವರೇ ತೆಗೆದುಕೊಳ್ಳಬೇಕಾಗುತ್ತದೆ. ಅವರು ಬಂದರೆ ಹೆಚ್ಚು ಸಹಾಯಕವಾಗುತ್ತದೆ. ನಾವು ಹೇಳುವುದನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ. ಇದರಿಂದ ಹೆಚ್ಚು ಸಹಕಾರಿಯಾಗುತ್ತದೆ.

ಶ್ರೀ ಆರ್ ವಿ. ದೇಶಪಾಂಡೆ.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟದ್ದು. ಬೆಂಗಳೂರು ನಗರಕ್ಕೆ ಸಂಬಂಧಪಟ್ಟದ್ದು ಆಗಿದ್ದರೆ ನಾನೇ ಉತ್ತರ ಹೇಳುತ್ತಿದ್ದೆ.

ಶ್ರೀ ಎಂ. ಪಿ. ಪ್ರಕಾಶ್.—ಚರ್ಚೆಯನ್ನು ಪ್ರಾರಂಭ ಮಾಡಲಿ.

ಅಧ್ಯಕ್ಷರು.—ಆಯಿತು. ಪ್ರಾರಂಭ ಮಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಫ್ಲಡ್ ಬಗ್ಗೆ ಆಗಲಿ, ಬರಗಾಲದ ಬಗ್ಗೆ ಆಗಲಿ ನಾವು ಹೇಳುವಾಗ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿ ರಾಜ್ ಮಂತ್ರಿಗಳು ಕೃಷಿಯ ಮಂತ್ರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಇಲ್ಲಿ ಇರಬೇಕಾಗುತ್ತದೆ. ಇದರಿಂದಾಗಿ ಮಾನ್ಯ ಸದಸ್ಯರು ಹೇಳುವಂತಹದ್ದನ್ನು ಗಮನದಲ್ಲಿಟ್ಟುಕೊಂಡು ಅಂತಹ ಕಡೆ ರಿಪೇರಿ ಕೆಲಸಗಳನ್ನು ಹಾಗೂ ಇನ್ನಿತರೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಹೆಚ್ಚು ಸಹಾಯಕವಾಗುತ್ತದೆ. ಇಲ್ಲದಿದ್ದರೆ